# ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಭಾಷೆ ಕಲಿಸಲು ಶಿಕ್ಷಕರ ಸಿದ್ಧತೆ

## Teacher Preparation for Teaching Language in Elementary Schools

ಪ್ರೇಮ ರಘುನಾಥ್

ಭಾಷೆಯು ಸಂಪೂರ್ಣವಾಗಿ ಮಾನವರ ವಿಶಿಷ್ಟ ಚಟುವಟಿಕೆಯಾಗಿದೆ. ಇತರ ಪ್ರಾಣಿಗಳಲ್ಲಿ, ಭೂಚರ ಜಲಚರಗಳು- ಕೀಟಗಳು, ಹಕ್ಕಿಗಳೂ ತಮ್ಮ ತಮ್ಮ ಪ್ರಭೇದಗಳೊಂದಿಗೆ ಬದುಕುಳಿಯಲು, ಸಂತಾನಾಭಿವೃದ್ಧಿ ನಡೆಸಲು 'ಸಂವಹನ' ನಡೆಸುತ್ತವೆ ಎಂಬುದಕ್ಕೆ ಪ್ರಮಾಣಗಳಿದ್ದರೂ, ಅದಕ್ಕೆ ಮಾನವರ ಭಾಷೆಯೊಂದಿಗೆ ನಿಜವಾದ ಹೋಲಿಕೆಯೇ ಇಲ್ಲ. ಪ್ರಾಣಿಗಳಲ್ಲಿ 'ಬಹು ಸೂಕ್ಷ್ಮ' ಭಾವನೆಗಳಾದ ಪ್ರೀತಿ, ವಿಧೇಯತೆಗಳು ಪರಸ್ಪರ ಸ್ಪರ್ಶಿಸುವುದರಿಂದ ಮತ್ತು ನೆಕ್ಕುವುದರಿಂದ ವ್ಯಕ್ತವಾಗುತ್ತವೆ.

ಅದೇನೇ ಇರಲಿ, ಭಾಷೆಯನ್ನು ಪ್ರತಿಯೊಂದು ಚಟುವಟಿಕೆಗೂ ಉಪಕರಣವಾಗಿ ಬಳಸುವುದು ಹೋಮೋಸೆಪಿಯನ್ ಗಳ ವೈಶಿಷ್ಟ್ಯವಾಗಿದೆ ಎಂದು ನನಗನಿಸುತ್ತದೆ. ನಾನು, ಇನ್ನೂ ಮುಂದೆ ಹೋಗಿ ನಾವು ಭಾಷೆಯೊಳಗೆ ಮುಳುಗಿಹೋಗಿದ್ದೇವೆ ಎನ್ನುತ್ತೇನೆ. ನಮ್ಮ ಉದ್ದೇಶಗಳು ಮತ್ತು ಆಲೋಚನೆಗಳು, ಸಾರ್ವಜನಿಕವಾಗಿರಲಿ ಇಲ್ಲದಿರಲಿ, ಭಾಷೆಯೊಳಗೆ ಹಾಸುಹೊಕ್ಕಾಗಿವೆ. ಈ ಲೇಖನದಲ್ಲಿ, ನಮ್ಮ ಮಕ್ಕಳಿಗೆ ಶಾಲಾ ಆರಂಭದ ಎರಡು ವರ್ಷಗಳಲ್ಲಿಯೇ ಸಾಕಷ್ಟು ಭಾಷಾ ಕೌಶಲಗಳನ್ನು ಗಳಿಸಿಕೊಳ್ಳುವಂತೆ ಸಿದ್ಧತೆ ಮಾಡುವುದು ಅಗತ್ಯವೆಂದು ನಾನು ಪ್ರತಿಪಾದಿಸುತ್ತೇನೆ. ಆ ಕೌಶಲಗಳು ತದನಂತರದ ಅವರ ಜೀವನದಲ್ಲಿ ಗಟ್ಟಿಯಾಗಿ ನೆಲೆನಿಂತು ಕಾಲದ ಪರೀಕ್ಷೆಗಳನ್ನು ಮತ್ತು ಬದುಕಿನ ವ್ಯತ್ಯಯಗಳನ್ನು ಎದುರಿಸಬಲ್ಲವಾಗುವಂತಹವು. ಆ ಸಿದ್ಧತೆ ಈ ಕೆಳಕಂಡ ವಿಷಯಗಳನ್ನು ಒಳಗೊಂಡಿದೆ:

- ತಕ್ಷಣದ ಶಾಲಾ ಅಗತ್ಯಗಳನ್ನು ಪೂರೈಸಿಕೊಳ್ಳುವಂತೆ ಮಕ್ಕಳಿಗೆ ಸಾಕಷ್ಟು ಭಾಷಾ ಕೌಶಲಗಳನ್ನು ಒದಗಿಸಿ ಕೊಡುವುದು (ಶೈಕ್ಷಣಿಕ).
- ಶಾಲಾ ತರಗತಿಯಿಂದಾಚೆಗೆ ಅವರಿಗೆ ಈ ಕೌಶಲಗಳನ್ನು ವಿಸ್ತರಿಸಿಕೊಳ್ಳಲು ಅವಕಾಶಗಳನ್ನು ಒದಗಿಸಿ ಕೊಡುವುದು (ಸಾಮಾಜಿಕ).
- ಈ ಕೌಶಲಗಳನ್ನು ಮುಂದಿನ ಅವರ ಜೀವನದಲ್ಲಿ ಬಳಸುವಂತೆ ಆಸಕ್ತಿ ಮೂಡಿಸುವುದು

ಭಾರತೀಯ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಮತ್ತೊಂದು ವಿಚಾರವೆಂದರೆ, ಮಾತೃಭಾಷೆ (ಎಲ್ 1) ವಹಿಸುವ ಪಾತ್ರವನ್ನು ಇಂಗ್ಲಿಷ್ ಭಾಷೆ (ಎರಡನೇ ಭಾಷೆ -ಎಲ್ 2) ವಹಿಸಬಲ್ಲದು ಎಂಬ

ನಮ್ಮ ನಂಬಿಕೆ. ಹೀಗಾಗಿ ಎಲ್ ೧ ನ ಎಲ್ಲಾ ಕಾರ್ಯಗಳನ್ನೂ ಎಲ್ ೨ ಮಾಡುವಂತೆ ಅದನ್ನು ಎಲ್೧ನ ಮೇಲೆ ಹೇರುವುದು ಹೇಗೆ ಎಂಬುದು ಭಾರತೀಯ ತರಗತಿಗಳಲ್ಲಿ ದೇಶದುದ್ದಗಲಕ್ಕೂ ಶಿಕ್ಷಕರು ಎದುರಿಸುತ್ತಿರುವ ಮೂಲಭೂತ ಕಠಿಣ ಸಮಸ್ಯೆಯಾಗಿದೆ. ಹೀಗೆ ಮಾಡುವುದು ಸಾಧ್ಯವೇ ಆದರೂ, ಅದು ಸೂಕ್ತವೇ ಎಂಬುದು ಚರ್ಚಿಸಬೇಕಾದ ವಿಚಾರ ಮತ್ತು ಇದು ಕೆಲವು ವರ್ಷಗಳ ಹಿಂದೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯವು ನಡೆಸಿದ ಲಂಬರೇಖಾತ್ಮಕ ಅಧ್ಯಯನದ ಪ್ರಮುಖ ವಿಷಯವಾಗಿತ್ತು (ಡಾ. ಸೀತಾ ಮತ್ತು ಪ್ರೇಮ ರಘುನಾಥ್). ಆದರೆ ಈ ವಿಷಯದಲ್ಲಿ ಯಾವುದೇ ತೃಪ್ತಿಕರ ನಿರ್ಧಾರ ತಳೆಯಲು ಸಾಧ್ಯ ವಾಗಲಿಲ್ಲ ಎನ್ನುವುದು ಮಾನವ ಮೆದುಳಿನಲ್ಲಿ ಭಾಷೆ ವಹಿಸುವ ಸಂಕೀರ್ಣ ಪಾತ್ರಕ್ಕೆ ಸಾಕ್ಷಿ. ಅದೇನೇ ಆದರೂ ಎಲ್ 2 ಇಲ್ಲಿ ಇದ್ದೇ ಇರುತ್ತದೆ. ಇಂಗ್ಲಿಷ್ ಬಲ್ಲ ಜನಸಂಖ್ಯೆಯ ಎಷ್ಟು ಭಾಗ ಇದನ್ನು ಸಾಮಾಜಿಕ ಸಂಪರ್ಕಕ್ಕೆ, ಭಾವನಾತ್ಮಕ ತೃಪ್ತಿಗೆ, ಬಳಸುತ್ತಾರೆ ಎಂಬುದು ಸ್ಪಷ್ಟವಾಗಿಲ್ಲದಿದ್ದರೂ ವಾಸ್ತವದಲ್ಲಿ ಅದೊಂದು ಭಾರತೀಯ ಭಾಷೆಯೇ ಆಗಿಬಿಟ್ಟಿದೆ. ವಿದ್ಯಾರ್ಥಿಗಳಿಗೆ ವಿಶ್ವದೃಷ್ಟಿಯನ್ನು ಕೊಡುವ ಭಾಷೆಯಾಗಬೇಕು ಎನ್ನುವುದಕ್ಕಿಂತ ಶಿಕ್ಷಕರು ಅವರನ್ನು ಆರ್ಥಿಕ ಮತ್ತು ವಾಣಿಜ್ಯಲೋಕಕ್ಕೆ ಸಜ್ಜುಗೊಳ್ಳುವಂತೆ ಆ ಭಾಷೆಯನ್ನು ಕಲಿಸಬೇಕು ಎಂಬ ಸನ್ನಿವೇಶವನ್ನಿಟ್ಟುಕೊಂಡು ನಾವು ಮಾತನಾಡುತ್ತಿದ್ದೇವೆ.

ಭಾಷಾ ಗಳಿಕೆ ಅಥವಾ ಭಾಷಾಜ್ಞಾನ ಆಲಿಸುವುದರಿಂದ ಶುರುವಾಗುತ್ತದೆ. ಮಗುವಿನ ಶ್ರವಣಶಕ್ತಿಯು ಸಹಜವಾದುದಾಗಿದ್ದರೆ ಅದು ಮೊದಲು ಶಬ್ದಗಳನ್ನು, ನಂತರ ಪದಗಳನ್ನು, ಆನಂತರ ವಾಕ್ಯಗಳನ್ನು ಕಲಿಯುವುದರ ಮೂಲಕ ತನ್ನ ಭಾಷಾಲೋಕವನ್ನು ಕಟ್ಟಿಕೊಳ್ಳುತ್ತದೆ ಎಂದು ಯಾವುದೇ ಅನುಮಾನವಿಲ್ಲದೆ ಭಾವಿಸಬಹುದು. ಮಾತೃಭಾಷೆಯಾಗಿರಲಿ ಅಥವಾ ಬೇರೆ ಭಾಷೆಯಾಗಿರಲಿ ಈ ಮಾತಿನ ಭಾಷೆಯನ್ನೇ ಪ್ರತಿಯೊಬ್ಬ ವ್ಯಕ್ತಿಯು ಕೇಳಿಸಿಕೊಳ್ಳುವುದು.

ಮೂರು ವರ್ಷಕ್ಕೆ ಎಲ್ 2 ವನ್ನು ಮಗುವಿಗೆ ಪರಿಚಯಿಸಬೇಕೆಂಬ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಇದನ್ನು ನನಸು ಮಾಡುವ ಕೆಲಸ ಪೂರ್ವ ಪ್ರಾಥಮಿಕ ಶಿಕ್ಷಕರದ್ದಾಗಿದೆ. ಇಂಗ್ಲಿಷ್ ಕಲಿಯುವಿಕೆಯು, ವಿಶೇಷವಾಗಿ ಶಿಕ್ಷಕರ ದೃಷ್ಟಿಯಲ್ಲಿ, ನಿಜ ಜೀವನದ ಯಾವ ಸಂದರ್ಭವನ್ನು ಒಳಗೊಂಡಿದೆ? ಇದನ್ನು ಎರಡು ಹಂತಗಳಾಗಿ ವಿಂಗಡಿಸಬಹುದು:

ಮೊದಲನೆಯದಾಗಿ, ಇಂಗ್ಲಿಷ್ ನ ಅಗತ್ಯವಿರುವ ಸನ್ನಿವೇಶಗಳ ಮಾದರಿಗಳನ್ನು ಸಂಗ್ರಹಿಸಿ.. ಜನ ತಮ್ಮದೇ ಮಾತೃಭಾಷೆಯಲ್ಲಿ ಇತರರ ಮಾತನ್ನು ಕೇಳುವಂತಹ, ನಿಮಗೆ ತೋಚುವಂತಹ ಎಲ್ಲ ಸಂದರ್ಭಗಳನ್ನು ಪಟ್ಟಿಮಾಡಿಕೊಳ್ಳಿ. ಅದು ಪ್ರತಿಕ್ರಿಯಿಸುವುದು, ಉತ್ತರಿಸುವುದು, ವಿಮರ್ಶಿಸುವುದು ಮುಂತಾದ ಯಾವುದೇ ಸನ್ನಿವೇಶವಾಗಿರಬಹುದು. ಆದರೆ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಮಕ್ಕಳು ಆಡುವ ಮಾತುಗಳನ್ನು ಅರ್ಥಮಾಡಿಕೊಳ್ಳಬಲ್ಲವರಾಗಿರಬೇಕು. ನೀವು

ನಿಮ್ಮೊಂದಿಗೆ ದಿನನಿತ್ಯದ ಆಗುಹೋಗುಗಳ ಬಗ್ಗೆ ಮಾತನಾಡಿಕೊಳ್ಳಿ ಮತ್ತು ಅದನ್ನೇ ಟಿಪ್ಪಣಿ ಮಾಡಿಟ್ಟುಕೊಳ್ಳಿ ಎಂದು ಪೆನ್ನಿ ಉರ್ ಸಲಹೆ ನೀಡುತ್ತಾರೆ.

ಇಂಗ್ಲಿಷ್ ಮತ್ತು ಮಾತೃಭಾಷೆಯಲ್ಲಿರುವ ಸಾಮಾನ್ಯಾಂಶಗಳನ್ನು ಗುರುತಿಸುವುದು ಎರಡನೆಯ ಅಂಶವಾಗಿದೆ. ತರಗತಿಯೊಳಗೆ ಇದನ್ನು ಸಾಧಿಸುವುದು ಹೇಗೆ? ಇಲ್ಲಿ ಕೆಲವು ಸಲಹೆಗಳಿವೆ:

**ದಿನ 1:** ಮೊದಲನೆಯದು, ಖಂಡಿತವಾಗಿಯೂ, ಅನೌಪಚಾರಿಕ ಮಾತುಕತೆ. ಕೇಳಿಸಿಕೊಳ್ಳುವ ಬಹುತೇಕ ಪಠ್ಯಗಳು ಅಪ್ಪಟ, ಸ್ವಯಂಸ್ಫೂರ್ತಿಯುಳ್ಳ ಮಾತುಗಳಿಂದ ಕೂಡಿರಬೇಕು ಅಥವಾ ಅಂತಹುದರ ಅನುಸರಣೆ ಆಗಿರಬೇಕು.

ಈ ವೇಳೆಗೆ ತರಗತಿಯು, ಸರಳ ಪದಗಳನ್ನು, ಆ ಮೂಲಕ ಭೂತ, ವರ್ತಮಾನ ಪ್ರತ್ಯಯಗಳನ್ನುಳ್ಳ ಸೂಕ್ತ ವ್ಯಾಕರಣವನ್ನು ಅರ್ಥಮಾಡಿಕೊಳ್ಳಬೇಕು. ಆ ಮೂಲಕ ಸಾಂಪ್ರದಾಯಿಕ ಪಠ್ಯಪುಸ್ತಕಗಳಿಂದಾಚೆಗೆ ಸರಳ ವಾಕ್ಯಗಳನ್ನು ರಚಿಸುವ ಸಾಮರ್ಥ್ಯ ಹೊಂದಿರಬೇಕು.

ಉದಾಹರಣೆಗೆ,

ವಾಟ್ ಆರ್ ಯುವರ್ ನೇಮ್ಸ್? (ನಿಮ್ಮಗಳ ಹೆಸರೇನು?)

ಮೈ ನೇಮ್ ಈಸ್ (ನನ್ನ ಹೆಸರು) ______, ಹರ್ ನೇಮ್ ಈಸ್ (ಅವಳ ಹೆಸರು)______

ಇದನ್ನು ಅಭ್ಯಾಸ ಮಾಡಿಸುವುದು ಮತ್ತು,

ಮೈ ನೇಮ್ ಈಸ್ (ನನ್ನ ಹೆಸರು)________ ಮತ್ತು ಶಿ ಈಸ್ (ಅವಳ ಹೆಸರು)___________

ಹೌ ಡು ಯು ಬೋಥ್ ಕಮ್ ಟು ಸ್ಕೂಲ್? (ನೀವಿಬ್ಬರೂ ಶಾಲೆಗೆ ಹೇಗೆ ಬರುತ್ತೀರಿ?)

ಐ ಕಮ್ ವಾಕಿಂಗ್ ಅಂಡ್ ಶಿ ಕಮ್ಸ್ ಬೈ ಸೈಕಲ್ (ನಾನು ನಡೆದುಕೊಂಡು ಬರುತ್ತೇನೆ ಮತ್ತು ಅವಳು ಸೈಕಲ್ಲಿನಲ್ಲಿ ಬರುತ್ತಾಳೆ).

ಇಲ್ಲಿ ಅಂಡ್ (ಮತ್ತು) ಹಾಗೂ ಬಟ್ (ಆದರೆ) ಎಂಬ ಪದಗಳನ್ನು ಬಳಸುವ ಸಂದರ್ಭವನ್ನು ತೋರಿಸಿಕೊಡಿ. ಅಂಡ್ ಪದವನ್ನು ಎರಡು ವಸ್ತುಗಳ ಸಂಬಂಧವನ್ನು ತಿಳಿಸಲು ಹಾಗೂ ಬಟ್ ಪದವನ್ನು ವ್ಯತ್ಯಾಸವನ್ನು ಅಥವಾ ಏನಾದರೂ ಅನೀರೀಕ್ಷಿತವಾದುದು ಘಟಿಸಿದಾಗ ಬಳಸಲಾಗುತ್ತದೆ ಎಂಬುದನ್ನು ತಿಳಿಸುವುದು.

ಐ ವೆಂಟ್ ಟು ಮೈ ಫ್ರೆಂಡ್ಸ್ ಹೌಸ್. ಶಿ ವಾಸ್ ನಾಟ್ ದೇರ್(ನಾನು ನನ್ನ ಗೆಳತಿಯ ಮನೆಗೆ ಹೋದೆ. ಅವಳು ಮನೆಯಲ್ಲಿ ಇರಲಿಲ್ಲ).

ಐ ವೆಂಟ್ ಟು ಮೈ ಫ್ರೆಂಡ್ಸ್ ಹೌಸ್ ಬಟ್ ಶಿ ವಾಸ್ ನಾಟ್ ದೇರ್. (ನಾನು ನನ್ನ ಗೆಳತಿಯ ಮನೆಗೆ ಹೋದೆ ಆದರೆ ಅವಳು ಮನೆಯಲ್ಲಿ ಇರಲಿಲ್ಲ).

ಅಥವಾ ಆಯ್ಕೆ/ಅನಿಶ್ಚತತೆಯನ್ನು ಸೂಚಿಸುತ್ತದೆ.

ವೆನ್ ಡು ಯು ಈಟ್ ಡಿನ್ನರ್? (ನೀವು ರಾತ್ರಿ ಎಷ್ಟೊತ್ತಿಗೆ ಊಟ ಮಾಡುತ್ತೀರಿ?)

ಐ ಈಟ್ ಅಟ್ 8 ಆರ್ 8-30. (ನಾನು 8 ಅಥವಾ 8-30 ಕ್ಕೆ ಊಟ ಮಾಡುತ್ತೇನೆ)

ಇದರ ವ್ಯತ್ಯಾಸವನ್ನು ಹೀಗೆ ತೋರಿಸುವುದು:

ಸಮ್ ಟೈಮ್ಸ್ ಐ ಈಟ್ ಅಟ್ 8. ಸಮ್ ಟೈಮ್ಸ್ ಅಟ್ 8-30 (ಕೆಲವು ಸಲ 8 ಗಂಟೆಗೆ ಊಟ ಮಾಡುತ್ತೇನೆ. ಕೆಲವು ಸಲ 8-30ಕ್ಕೆ.)

ಸಮುಚ್ಚಯಾವ್ಯಯಗಳನ್ನು (ಕಂಜಕ್ಷನ್) ಬಳಸಿ ವಾಕ್ಯ ರಚಿಸುವ 4 ಸನ್ನಿವೇಶಗಳ ಉದಾಹರಣೆಗಳು:

- ದಿನನಿತ್ಯದ ಆಗುಹೋಗುಗಳನ್ನು ಕುರಿತು ಮಾತನಾಡುವುದು
- ಸ್ನೇಹಿತರನ್ನು ಭೇಟಿ ಮಾಡುವುದು
- ಶಾಲೆಗೆ ಹೋಗಲು ತಯಾರಾಗುವುದು
- ಟೀ ಮಾಡುವುದು

**ದಿನ 2:** ಕೆಳಗಿನವುಗಳನ್ನು ಸಹಪಾಠಿಗಳೊಂದಿಗೆ ಅಭ್ಯಾಸ ಮಾಡಿಸುವುದು:

- ತಮ್ಮಿಷ್ಟದ ಕತೆ ಹೇಳುವುದು
- ಸಂಬಂಧಿಕರ ಮನಗೆ ಹೋಗುವುದು

ಇದರಿಂದ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ, ಸನ್ನಿವೇಶಗಳು ಮಕ್ಕಳಿಗೆ ಆಪ್ತವಾಗಿದ್ದಷ್ಟು ಅದರ ಪ್ರಭಾವವು ಮಕ್ಕಳ ಮೇಲೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ತರಗತಿಯೊಳಗೆ ಈ ರೀತಿಯ ಚಟುವಟಿಕೆಗಳನ್ನು ಸೃಷ್ಟಿಸುವುದು ಬಹಳ ಮುಖ್ಯ, ಆಗ ಮಕ್ಕಳು ಆ ಚಟುವಟಿಕೆಗಳಲ್ಲಿ ಭಾಗವಹಿಸಬಹುದು. ಮೊದಲ ಸಲ ಕೇಳಿಸಿಕೊಂಡಾಗಲೇ ವಿಷಯಗಳನ್ನು ತಿಳಿದುಕೊಳ್ಳುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ. ಇಲ್ಲಿ ಚರ್ಚೆಯು ಬಹು ಮುಖ್ಯ ಪಾತ್ರ ವಹಿಸುತ್ತದೆ. ಏಕೆಂದರೆ, ಮಕ್ಕಳನ್ನು ಜಾಲ ಮಾದರಿ(ವೆಬ್ ಪ್ಯಾಟರ್ನ್)ಯಲ್ಲಿ ಆಲೋಚಿಸುವಂತೆ ಮಾಡುವುದಲ್ಲದೆ ಅವರು ಭಾಷೆಯನ್ನು ಮತ್ತಷ್ಟು ಆಲೋಚಿಸಲು ಬಳಸುತ್ತಾರೆ. ಇದು ಕಾರ್ಯ

ಚಟುವಟಿಕೆಯ ಮೊದಲ ಅಗತ್ಯವನ್ನು ಪೂರ್ಣಗೊಳಿಸುತ್ತದೆ. ಅದೇನೆಂದರೆ, ಅವರು ಕೇಳಲು ಹೊರಟಿರುವ ಪಠ್ಯದ ಬಗ್ಗೆ ಮುಂದಾಗಿಯೇ ಕೆಲವು ಆಲೋಚನೆಗಳನ್ನು ಹೊಂದುವಂತಾಗುತ್ತದೆ. ಪಠ್ಯ ಆಲಿಸುವ ಉದ್ದೇಶವನ್ನೂ ಸ್ಪಷ್ಟಗೊಳಿಸಿರಬೇಕು. ಶಿಕ್ಷಕರಾಗಿ ನೀವು ಪ್ರಶ್ನೆಗಳನ್ನು ಕೇಳುತ್ತೀರೋ ಅಥವಾ ಮತ್ತಷ್ಟು ಕಾರ್ಯ ಚಟುವಟಿಕೆಗಾಗಿ ಪ್ರಸ್ತುತ ಪಠ್ಯವನ್ನು ಆಧಾರವಾಗಿ ಬಳಸುತ್ತೀರೋ? ಉದಾಹರಣೆಗೆ, ನೀವು ಮಕ್ಕಳಿಗೆ ಹಾಡು ಅಥವಾ ಕತೆ ಕೇಳುವಂತೆ ಅಥವಾ ಸಿನಿಮಾ ನೋಡುವಂತೆ ಸೂಚಿಸಿ ಭಾಷೆಯನ್ನು ಪರಿಚಯಿಸಲು ಇದನ್ನು ಒಂದು ಮಾದರಿಯಾಗಿ ಬಳಸಬಹುದು.. ಮಕ್ಕಳ ಪ್ರತಿಕ್ರಿಯೆಯನ್ನು ಗಮನಿಸಿ ಅಂದರೆ ಅವರ ದೇಹ ಭಾಷೆ ಮತ್ತು ಮುಖ ಭಾವನೆಗಳನ್ನು ಗಮನಿಸಿ ಅವರು ಕತೆಯನ್ನು/ಹಾಡನ್ನು ಅರ್ಥಮಾಡಿಕೊಂಡರೆ ಇಲ್ಲವೇ ಎಂದೂ ಹೇಳುವುದು ಸಾಧ್ಯ. ಉದಾಹರಣೆಗೆ, ನಿಮ್ಮ ಪ್ರತಿಕ್ರಿಯೆಯ ಪಟ್ಟಿಯು ಇವುಗಳನ್ನು ಒಳಗೊಂಡಿರಬಹುದು:

- ಸೂಚನೆಗಳನ್ನು ಪಾಲಿಸುವುದು, ಅಂದರೆ ನೀವು ಓದಿದ ಪಠ್ಯಕ್ಕೆ ಸಂಬಂಧಿಸಿದ ಚಿತ್ರ ಬಿಡಿಸುವುದು/ಚಿತ್ರಕ್ಕೆ ಬಣ್ಣ ಹಚ್ಚುವುದು ಅಥವಾ ಏನನ್ನಾದರೂ ಮಾಡುವುದು (ಕಾಗದದ ದೋಣಿ).
- ವಸ್ತುಗಳನ್ನು ಗುರುತಿಸುವುದು, ನೀವು ಓದಿದ ಪಟ್ಟಿಯ ವಸ್ತುಗಳನ್ನು ಗುರುತಿಸುವುದು, ಉದಾಹರಣೆಗೆ, ಪಿಕ್ನಿಕ್ ಗೆ ಬೇಕಾದ ಮತ್ತು ಟ್ರೇಯಲ್ಲಿಟ್ಟಿರುವ ವಸ್ತುಗಳು

4 ಮತ್ತು 5 ನೇ ತರಗತಿಗಾಗಿ ನೀವು ಇವುಗಳನ್ನು ಸೇರಿಸಿಕೊಳ್ಳಬಹುದು:

- ತಪ್ಪುಗಳನ್ನು, ಮೊದಲಿನ ಹೇಳಿಕೆಗಳಿಗೆ ವಿರುದ್ಧವಾದ ಹೇಳಿಕೆಗಳನ್ನು ಕಂಡು ಹಿಡಿಯುವುದು.
- ಊಹಿಸುವುದು ಮತ್ತು ಅಂದಾಜಿಸುವುದು- ಮುಂದೆ ಏನಾಗುತ್ತದೆ?/ ಪಾತ್ರಕ್ಕೆ ಏನಾಗುತ್ತದೆ?/ನಿಜವಾದ ಅಪರಾಧಿ ಯಾರಿರಬಹುದು?

ಮಾತನಾಡುವುದನ್ನು ಕಲಿಸುವ ಚಟುವಟಿಕೆಯು ಒಮ್ಮೊಮ್ಮೆ ಬಹಳ ಸುಲಭವೆನಿಸಿದರೆ, ಕೆಲವೊಮ್ಮೆ ಬಹಳ ಕಠಿಣವೆನಿಸುತ್ತದೆ. ತರಗತಿಯಲ್ಲಿ ಮಕ್ಕಳು ಪದೇಪದೇ ಅದೇ ತಪ್ಪುಗಳನ್ನು ಮಾಡುವುದನ್ನು ನೋಡಿ ನೋಡಿ ಒಬ್ಬ ಶಿಕ್ಷಕಿ ಅದೆಷ್ಟು ಸಲ ಹತಾಶರಾಗಿಬಿಡುವುದಿಲ್ಲ! ಉದಾಹರಣೆಗೆ, , 'ಟು ಸೆ' ಮತ್ತು 'ಟು ಟೆಲ್' ಕ್ರಿಯಾಪದಗಳಲ್ಲಿರುವ ವ್ಯತ್ಯಾಸ ಕಲಿಯುವಾಗ. 'ಟೆಲ್' ಕ್ರಿಯಾಪದವು ಕರ್ಮಪದದೊಂದಿಗೆ ಮಾತ್ರ ಬರುತ್ತದೆ, ಟೋಲ್ಡ್ ಮಿ/ಹಿಮ್/ಸಮ್ಒನ್, 'ಸೆ' ಕ್ರಿಯಾಪದಕ್ಕೆ ಹಾಗಿಲ್ಲ (ಹಿ ಸೆಡ್.). ಆದರೂ, , "ಮೈ ಮದರ್ ಟೋಲ್ಡ್ ಶಿ ವಿಲ್ ಗಿವ್ ಯು ಎ ಲೆಟರ್". ಇಂಥ ಪ್ರಯೋಗಗಳನ್ನು ಎಷ್ಟೊಂದು ಸಲ ಕೇಳಿದ್ದೇವೆ !

ಪೂರ್ವ ಪ್ರಾಥಮಿಕ ಶಾಲೆಯ ಭಾಷಾ ಶಿಕ್ಷಕರು ತಮಗೆ ತಾವೇ ಕೇಳಿಕೊಳ್ಳಬೇಕಾದ ಎರಡು ಪ್ರಶ್ನೆಗಳು ಇಲ್ಲಿವೆ:

1. ಒಂದು ಚಟುವಟಿಕೆಯು ಯಶಸ್ವಿಯಾಗಿದೆ ಎಂದು ಹೇಗೆ ನಿರ್ಧರಿಸುತ್ತೀರಿ?
2. ಮಕ್ಕಳು ಇಂಗ್ಲಿಷ್ ನಲ್ಲಿ ಮಾತನಾಡುವಂತೆ ಮಾಡುವಾಗ ತರಗತಿಯೊಳಗೆ ನೀವು ಎದುರಿಸಿದ ಸಮಸ್ಯೆಗಳಾವುವು?

ಶಿಕ್ಷಕರು ಮಕ್ಕಳ ತರಗತಿಯೊಳಗೆ ಮೌಖಿಕ/ಮಾತಿನ ಭಾಷೆಯ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ಇಲ್ಲಿ ಕೆಲವು ಚಟುವಟಿಕೆಗಳಿವೆ;

ಅನೇಕ ವಸ್ತುಗಳನ್ನೊಳಗೊಂಡ ಎರಡು ಚಿತ್ರಗಳನ್ನು ತೆಗೆದುಕೊಳ್ಳಿ, ಉದಾಹರಣೆಗೆ, ಹಳ್ಳಿಯ ಮತ್ತು ಪಟ್ಟಣದ ದೃಶ್ಯಗಳಿರುವ ಚಿತ್ರಗಳು. ಪ್ರತಿಯೊಂದು ಗುಂಪೂ ಚಿತ್ರಗಳನ್ನು ಎರಡು ನಿಮಿಷಗಳ ಕಾಲ ಚೆನ್ನಾಗಿ ಗಮನಿಸಲಿ, ನಂತರ ಎಷ್ಟು ಸಾಧ್ಯವೋ ಅಷ್ಟು ಆ ಚಿತ್ರಗಳ ಬಗ್ಗೆ ಮಾತನಾಡಲಿ. ಪ್ರತಿಗುಂಪೂ ತಾವು ಹೇಳಿದ ಹೇಳಿಕೆಗಳನ್ನು ಗುರುತು ಹಾಕಲು ಒಬ್ಬ ಪ್ರತಿನಿಧಿಯನ್ನು ಆರಿಸಲಿ. ಆನಂತರ ಚಿತ್ರಗಳನ್ನು ಗುಂಪುಗಳ ನಡುವೆ ಅದಲುಬದಲಾಯಿಸಿ, ಮತ್ತೆ ಹೆಚ್ಚು ಹೇಳಿಕೆಗಳನ್ನು ಗುರುತು ಮಾಡಲು ಎರಡೂ ಗುಂಪೂ ಪ್ರಯತ್ನಿಸಲಿ.

ಎರಡನೇ ಚಟುವಟಿಕೆಯು ಬಹು ಪ್ರಸಿದ್ಧವಾದ "ವ್ಯತ್ಯಾಸ ಗುರುತಿಸಿ (ಸ್ಪಾಟ್ ದ ಡಿಫೆರೆನ್ಸ್)". ಇಲ್ಲಿ ಮಕ್ಕಳು ಜೋಡಿಯಲ್ಲಿ ಕೆಲಸ ಮಾಡಲಿ, ಜೋಡಿಯ ಇಬ್ಬರ ಬಳಿಯೂ ಬೇರೆಬೇರೆ ಚಿತ್ರಗಳಿರಲಿ. ಒಬ್ಬರು ಇನ್ನೊಬ್ಬರಿಗೆ ತಮ್ಮ ಚಿತ್ರಗಳಲ್ಲಿರುವ ವಸ್ತುಗಳ ಬಗ್ಗೆ ಒಂದೊಂದಾಗಿ ವಿವರಿಸಲಿ. ಅದೇ ರೀತಿ ಇಬ್ಬರೂ ಪರಸ್ಪರ ವಿವರಿಸಬೇಕು. ಒಂದೊಮ್ಮೆ ಒಂದು ಚಿತ್ರದಲ್ಲಿ ಹಣ್ಣಿರುವ ಮರದ ಚಿತ್ರವಿದ್ದು ಇನ್ನೊಂದು ಚಿತ್ರದಲ್ಲಿ ಹಣ್ಣಿಲ್ಲದಿರುವ ಮರದ ಚಿತ್ರವಿದ್ದರೆ ಅದನ್ನು ಗುರುತಿಸಬೇಕು. ಇಲ್ಲಿ ಶಿಕ್ಷಕರು ಎರಡು ವಿಷಯಗಳ ಬಗ್ಗೆ ಖಚಿತತೆ ಹೊಂದಿರಬೇಕು- ಒಂದು, ಜೋಡಿಯ ನಡುವಿನ ಚರ್ಚೆಯು ಆದಷ್ಟು ಇಂಗ್ಲಿಷ್ ನಲ್ಲೇ ಇರಬೇಕು, ಎರಡು, ಚಿತ್ರಗಳಲ್ಲೇನಿದೆ ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.

ಇನ್ನಿತರ ಮೌಖಿಕ/ಮಾತಿನ ಕೌಶಲ ಹೆಚ್ಚಿಸುವ ಚಟುವಟಿಕೆಗಳು ರೋಲ್ ಪ್ಲೇ ಮತ್ತು ಅದಕ್ಕೆ ಸಂಬಂಧಿಸಿದವು. ಉದಾಹರಣೆಗೆ, ಸಂಭಾಷಣೆಗಳು (ಅನೇಕ ತರಗತಿಗಳಲ್ಲಿ ಇದು ಆಚರಣೆಯಲ್ಲಿಲ್ಲದಿದ್ದರೂ, ಇದು ಒಂದು ಪರಿಣಾಮಕಾರಿ ವಿಧಾನ), ಕಿರು ನಾಟಕಗಳು, ಅಣಕು/ನಕಲು ಮಾಡುವುದು ಇಂಥವುಗಳಾಗಿರಬಹುದು. ಕೊನೆಯ ಎರಡು ವಿಧಾನಗಳು 7-10 ರ ವಯಸ್ಸಿನ ಮಕ್ಕಳಿಗೆ ಬಹಳ ಸೂಕ್ತವಾಗಿವೆ.

ಹೆಚ್ಚು ಸಂಕೀರ್ಣ ಕೌಶಲಗಳಾದ ಓದುವುದು ಬರೆಯುವುದನ್ನು ಬಹು ಕಾಳಜಿ ಮತ್ತು ಸೂಕ್ಷ್ಮತೆಯಿಂದ ಪರಿಚಯಿಸಬೇಕು. ನಮ್ಮ ಹೆಚ್ಚಿನ ಭಾರತೀಯ ತರಗತಿಗಳು ಗಮನದಲ್ಲಿಡಬೇಕಾದ ಮತ್ತೊಂದು ಸತ್ಯ ಸಂಗತಿಯೆಂದರೆ ತರಗತಿಗಯೊಳಗೆ ಮಾತ್ರ ಓದುವ ಅವಕಾಶಗಳು ದೊರೆಯುತ್ತವೆಂಬುದು. ಬಹು ಕಠಿಣ ಪ್ರಶ್ನೆಗಳೆಂದರೆ: ವಿದ್ಯಾರ್ಥಿಗಳಿಗೆ ಆರಂಭದ ಸ್ವಲ್ಪ ಸಮಯ ಹಾಗೆಯೇ ಮೌಖಿಕವಾಗಿ ಕಲಿಸಿ ಆನಂತರ ಓದುವುದನ್ನು ಕಲಿಸಬೇಕಾ? ಅಥವಾ, ಓದುವುದು ಬರೆಯುವುದನ್ನು ಶುರುವಿನಿಂದಲೇ ಕಲಿಸಬೇಕಾ? ಅನೇಕ ಶಾಲೆಗಳು ಎರಡನೆಯದರ ಪರ ನಿಲ್ಲುತ್ತವೆ. ಆದರೂ, ಈ ವಿಧಾನದ ಸಮಸ್ಯೆಯೆಂದರೆ, ದಿಢೀರನೆ ಹೊಸ ಕೌಶಲಗಳನ್ನು ಹೇರಿದಾಗ ಅವುಗಳನ್ನು ಗ್ರಹಿಸಲು ಮಕ್ಕಳು ಕಕ್ಕಾಬಿಕ್ಕಿಯಾಗುತ್ತಾರೆ.

**ಅಕ್ಷರಗಳನ್ನು ಪರಿಚಯಿಸುವ ಮೊದಲು ಮತ್ತಷ್ಟು ಪ್ರಶ್ನೆಗಳು**

ಅಕ್ಷರಗಳನ್ನು ಧ್ವನಿವಿಜ್ಞಾನದ ಮೂಲಕ ಕಲಿಸುವುದಾ ಅಥವಾ ನೇರವಾಗಿಯೇ ಪರಿಚಯಿಸುವುದಾ? ಹೆಸರಾ ಅಥವಾ ಶಬ್ದವಾ? ದೊಡ್ಡ ಅಕ್ಷರ (ಕ್ಯಾಪಿಟಲ್ ಲೆಟರ್) ಮತ್ತು ಸಣ್ಣ ಅಕ್ಷರ (ಸ್ಮಾಲ್ ಲೆಟರ್)ಗಳನ್ನು (ಯಾವುದೇ ಭಾರತೀಯ ಭಾಷೆಯಲ್ಲಿ ಇವು ಇಲ್ಲ) ಏನು ಮಾಡುವುದು?

ಧ್ವನಿವಿಜ್ಞಾನ ಮತ್ತು ನೇರವಾಗಿ ಪರಿಚಯಿಸುವುದು ಎರಡೂ ವಿಧಾನಗಳನ್ನು ಪ್ರಯತ್ನಿಸಲಾಗಿದೆ ಮತ್ತು ಯಶಸ್ವಿಯಾಗಿರುವುದೂ ಕಂಡುಬಂದಿದೆ. ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಅರಿಯಲು ಸುಲಭವಾಗಿ ದೊರಕುವ ಸಂಕೇತಗಳನ್ನು/ಚಿನ್ಹೆಗಳನ್ನು ಬಳಸುವುದು ಮುಖ್ಯ,. ಇವತ್ತಿನ ಸಂದರ್ಭದಲ್ಲಿ ದೂರದರ್ಶನದಿಂದಾಗಿ ಅನೇಕ ಪದಗಳು ಎಲ್ಲಾ ಕಡೆ ವ್ಯಾಪಿಸಿವೆ; ಅವುಗಳಿಗೆ ಭಾಷಾಂತರ ಬೇಕಾಗಿಲ್ಲ. ಶಿಕ್ಷಕರು ಈಗಾಗಲೇ ಮಕ್ಕಳಿಗೆ ಗೊತ್ತಿರಬಹುದಾದ ಇಂಗ್ಲಿಷ್ ಪದಗಳನ್ನು ಪಟ್ಟಿ ಮಾಡಿಕೊಂಡು ಮೊದಲು ಅವುಗಳನ್ನು ಕಲಿಸಬೇಕು (ಉದಾಹರಣೆಗೆ, ಹಣ್ಣುಗಳ ಹೆಸರು, ಕ್ರೀಡಾ ಉಪಕರಣಗಳು ಮತ್ತು ಸೌಲಭ್ಯಗಳು, ಕಾರು ಬೈಕುಗಳ ಹೆಸರು ಮತ್ತು ಅವುಗಳ ಕಾರ್ಯ, ತಿನ್ನುವ ಕುಡಿಯುವ ವಸ್ತುಗಳ ಹೆಸರುಗಳು). ಆದಾಗ್ಯೂ, ಈ ಕೆಳಗಿನ ವಿಷಯವಸ್ತುಗಳನ್ನು ಅವುಗಳ ಕಾರ್ಯಕ್ಷಮತೆ ಅಥವಾ ಅದರ ಕೊರತೆಗಾಗಿ ಪರಿಶೀಲಿಸಬೇಕು:

1. ಭಾಷೆ 2. ಪರಿವಿಡಿ 3. ವೇಗ 4. ಗಮನ 5. ಮುಂದಾಲೋಚನೆ 6. ಹಿನ್ನೆಲೆಯ ಮಾಹಿತಿ (ಪರಿಚಿತ ವಸ್ತುಗಳು ಓದುವುದನ್ನು ಮತ್ತಷ್ಟು ಸಮರ್ಥಿಸುತ್ತವೆ). 7. ಉತ್ತೇಜನ (ಯಶಸ್ವೀ ಕ್ರೀಡಾ ತಾರೆಯರು, ಮಕ್ಕಳಿಗಿಷ್ಟವಾದ ಆಟಗಾರರು, ಅಲ್ಲದೆ ಸಿನಿಮಾ ತಾರೆಯರು, ನಟ ನಟಿಯರ ಬಗ್ಗೆ ಮಾಹಿತಿಯಿದ್ದರೆ ಅದನ್ನು ಕಡೆಗಣಿಸಬಾರದು). 8. ಉದ್ದೇಶ 9. ತಂತ್ರಗಳು

- ಪರಿಶೀಲನೆ ಹಾಗೂ ವಿಶ್ಲೇಷಣಾ ತಂತ್ರಗಳಲ್ಲಿ ಕ್ರಮೇಣ ಪಳಗಿಸುವುದು, ಖುಷಿಗಾಗಿ ಓದುವುದನ್ನು ಅಥವಾ ಗಂಭೀರ ಓದನ್ನು ಬೆಳೆಸುವುದು.

ನಾನು ಉದ್ದೇಶಪೂರ್ವಕವಾಗಿಯೇ ಬರವಣಿಗೆಯ ಬಗ್ಗೆ ಹೇಳುವುದನ್ನು ಬಿಟ್ಟಿದ್ದೇನೆ, ಏಕೆಂದರೆ ಅದು ಬಹಳ ಸಂಕೀರ್ಣವಾದ ಚಟುವಟಿಕೆ. ಅದೇ ಮತ್ತೊಂದು ಲೇಖನವಾಗುವ ವಿಶಾಲತೆಯುಳ್ಳದ್ದು. ಆದರೂ ಇಲ್ಲಿ ನಾನೊಂದು ವಿಷಯ ಪ್ರಸ್ತಾಪಿಸಲು ಬಯಸುತ್ತೇನೆ, ಅದೇನೇಂದರೆ, ಫ್ರಾನ್ಸ್ ನಲ್ಲಿ ನಡೆದ ಅಧ್ಯಯನವೊಂದರ ಫಲಿತಾಂಶ- ಹುಡುಗಿಯರಿಗೆ ಹುಡುಗರಿಗಿಂತ ಬೇಗನೆ ಸಣ್ಣ ಸ್ನಾಯುಗಳು ಬೆಳವಣಿಗೆಯಾಗುತ್ತವೆಂಬುದು. (ಹುಡುಗರಿಗೆ ಓಡಲು, ನೆಗೆಯಲು, ಹತ್ತಲು ಸಮರ್ಥರಾಗುವಂತೆ ಬೇಗನೆ ದೊಡ್ಡ ಸ್ನಾಯುಗಳು ಬೆಳವಣಿಗೆಯಾಗುತ್ತವೆ) ಇದರಿಂದ ಬರವಣಿಗೆಯನ್ನು ಪರಿಚಯಿಸುವುದು ಹುಡುಗಿಯರಿಗೆ 4 ನೇ ವಯಸ್ಸಿಗೆ ಮತ್ತು ಹುಡುಗರಿಗೆ 5 ನೇ ವಯಸ್ಸಿಗೆ. ಇದು ಸಿದ್ಧತೆಯ ವಿಚಾರಕ್ಕೆ ನಮ್ಮನ್ನು ಕರೆದೊಯ್ಯುತ್ತದೆ.. ನಮ್ಮ ಮಕ್ಕಳೂ ಸಿದ್ಧರಾಗಬೇಕು, ಮತ್ತು ಸಿದ್ಧತೆ ಹಾಗೂ ಎಚ್ಚರ ಅವರನ್ನು ವೀಕ್ಷಿಸುವ ಶಿಕ್ಷಕರ ಸೂತ್ರವಾಗಬೇಕು.

***

**ಪ್ರೇಮ ರಘುನಾಥ್** ಚೆನ್ನೈನ ವಿದ್ಯಾ ಮಂದಿರದಲ್ಲಿ 23 ವರ್ಷಗಳು ಇಂಗ್ಲಿಷ್ ಶಿಕ್ಷಕಿಯಾಗಿದ್ದರು ಮತ್ತು ಉಪ ಪ್ರಾಂಶುಪಾಲರು ಹಾಗೂ ಇಂಗ್ಲಿಷ್ ವಿಭಾಗದ ಮುಖ್ಯಸ್ಥರೂ ಆಗಿ ನಿವೃತ್ತಿ ಹೊಂದಿದ್ದಾರೆ. ಬೋಧನಕಲೆಯ ಬಹುತೇಕ ಕೌಶಲವನ್ನು ಅವರು ವಿದ್ಯಾ ಮಂದಿರದಲ್ಲಿ ಕಲಿತರು. ಅವರು ಚೆನ್ನೈನ ರಾಮಕೃಷ್ಣ ಮಿಷನ್ ಆಶ್ರಮದ ಮೂಲಕ ಅನೇಕ ಯಶಸ್ವೀ ಮಾತನಾಡುವ, ಬರೆಯುವ ಇಂಗ್ಲಿಷ್ ಕೋರ್ಸಿನ ಸಾಮಗ್ರಿ ತಯಾರಿಸಿದ್ದಾರೆ ಮತ್ತು ಅದರ ನಿರ್ವಹಣೆ ಮಾಡಿದ್ದಾರೆ. ಪ್ರಸ್ತುತ ಅವರು ಎಂ ಸಿ ಟಿ ಎಂ ಸ್ಕೂಲ್, ಚೆನ್ನೈ, ಇಲ್ಲಿ ಇಂಟರ್ನ್ಯಾಷನಲ್ ಬ್ಯಾಚುಲರೇಟ್ ಕೋರ್ಸ್ ಅನ್ನು ಬೋಧಿಸುತ್ತಿದ್ದಾರೆ. ಅವರ ಸಂಪರ್ಕಕ್ಕೆ: ***prema.viswam@gmail.com***

ಅನುವಾದ: ನಾಗಮಣಿ ಎಸ್. ಎನ್.